ಕೇಳುತಿತ್ತು.

'ಮಕ್ಕಳು ಅಳುತಿದ್ದವು. ಅವಕ್ಕೆ ಭಯ. ನಿದ್ರೆ ಬಂದಿರಲಿಲ್ಲ. ನನ್ನ ಹೆಂಡತಿ ಮಕ್ಕಳನ್ನೆಲ್ಲ ಅಪ್ಪಿಕೊಂಡು ಸಮಾಧಾನ ಮಾಡುತಿದ್ದಳು. ಏನು ಮಾಡಬೇಕೋ ನನಗೆ ತೋಚಲಿಲ್ಲ.

'ಹೊತ್ತು ಹುಟ್ಟುವುದಕ್ಕೆ ಸ್ವಲ್ಪ ಮೊದಲು ಗಾಳಿ ಕಡಮೆಯಾಯಿತು. ಆಕಾಶ ಭೂಮಿ ಎರಡೂ ಒಟ್ಟಿಗೆ ಸೇರಿವೆ, ಒಟ್ಟಿಗೆ ಸೇರಿ ಎಲ್ಲಾ ಸದ್ದನ್ನೂ ಅದುಮಿಟ್ಟಿವೆ ಅನ್ನಿಸುವಂಥ ಹೊತ್ತು ಬೆಳಗಿನ ಜಾವದಲ್ಲಿ ಸ್ವಲ್ಪ ಹೊತ್ತು ಇರುತ್ತದೆ. ಮಕ್ಕಳು ಆರಾಮವಾಗಿ ಉಸಿರಾಡುತಿದ್ದರು ಈಗ. ಪಕ್ಕದಲ್ಲಿದ್ದ ಹೆಂಡತಿಯ ಉಸಿರು ಭಾರವಾಗಿದೆ ಅನಿಸುತಿತ್ತು.

'ಏನದು?' ಅಂದಳು ಹೆಂಡತಿ.

'ಏನು, ಏನು? ಅಂದೆ.

'ಅದು. ಶಬ್ದ, ಅಂದಳು.

'ನಿಶ್ಶಬ್ದ. ಮಲಗು ನೀನು. ಸ್ವಲ್ಪವಾದರೂ ನಿದ್ರೆಮಾಡು. ಇನ್ನೇನು ಬೆಳಕಾಗತದೆ, ಅಂದೆ.

ಆಮೇಲೆ ನನಗೂ ಕೇಳಿಸಿತು ಅದು. ಕತ್ತಲಲ್ಲಿ ನಮ್ಮ ಹತ್ತಿರವೇ ಬಾವಲಿಗಳು ರೆಕ್ಕೆ ಬಡಿದ ಹಾಗೆ. ಬಾವಲಿಗಳ ರೆಕ್ಕೆ ನೆಲ ಗುಡಿಸುತ್ತಿರುವ ಹಾಗೆ. ಎದ್ದು ಕೂತೆ. ಶಬ್ದ ಜೋರಾಯಿತು. ಬಾವಲಿಗಳ ಗುಂಪು ಬೆದರಿ, ಹಾರಿ ಹೋಗಲು ಬಾಗಿಲಲ್ಲಿ ಎಲ್ಲಿ ರಂಧ್ರವಿದೆಯೋ ಹುಡುಕ್ತಿರುವ ಹಾಗೆ. ನನ್ನ ಎದುರಿಗೇ ಪಿಸುದನಿ ಕೇಳಿತು ಅನ್ನಿಸಿ ತುದಿಗಾಲಲ್ಲಿ ನಡೆಯುತ್ತ ಬಾಗಿಲಿಗೆ ಹೋದೆ. ಬಾಗಿಲಲ್ಲೇ ನಿಂತೆ. ಅಲ್ಲಿ ಅವರನ್ನೆಲ್ಲಾ ನೋಡಿದೆ. ಲುವೀನಾದಲ್ಲಿದ್ದ ಎಲ್ಲಾ ಹೆಂಗಸರು. ತಲೆಯ ಮೇಲೆ ಶಾಲು ಹೊದ್ದು, ಭುಜದ ಮೇಲೆ ದೊಡ್ಡ ಪಾತ್ರೆ ಇಟ್ಟುಕೊಂಡು, ಕತ್ತಲಿನ ಹಿನ್ನೆಲೆಯಲ್ಲಿ ನೆರಳುಗಳ ಹಾಗೆ ಹೋಗುತಿದ್ದರು.

'ಯಾರು ನೀವು? ಇಷ್ಟು ಹೊತ್ತಿನಲ್ಲಿ ಎಲ್ಲಿಗೆ ಹೋಗುತಿದ್ದೀರಿ? ಏನು ಹುಡುಕುತಿದ್ದೀರಿ, ಅಂತ ಕೇಳಿದೆ.

ಅವರಲ್ಲಿ ಒಬ್ಬಳು 'ನೀರು ತರುವುದಕ್ಕೆ ಹೋಗುತಿದ್ದೇವೆ' ಅಂದಳು.

'ನನ್ನೆದುರಿಗೇ ಇದ್ದರು. ನನ್ನನ್ನೇ ನೋಡುತಿದ್ದರು. ಆಮೇಲೆ ಕಪ್ಪು ಮಡಕೆಗಳನ್ನು ಹೊತ್ತು ನೆರಳುಗಳ ಹಾಗೆ ನಡೆದು ಹೋದರು.

'ಲುವೀನಾದಲ್ಲಿ ನಾನು ಕಳೆದ ಮೊದಲ ರಾತ್ರಿಯನ್ನು ಯಾವತ್ತೂ ಮರೆಯಲಾರೆ.

'ಈ ಕತೆ ಕೇಳಿದ ಮೇಲೆ ಇನ್ನೊಂದು ಬಿಯರ್ ಹಾಕಬೇಕು ಅನ್ನಿಸಿಲ್ಲವಾ? ನನಗಂತೂ ಆ ನೆನಪಿನ ಕೆಟ್ಟ ರುಚಿ ಹೋಗಿಸುವುದಕ್ಕೆ ಇನ್ನೊಂದು ಬೇಕು.'

'ಲುವೀನಾದಲ್ಲಿ ನಾನು ಎಷ್ಟು ವರ್ಷ ಇದ್ದೆ ಅಂತ ಕೇಳಿದೆ. ಅಲ್ಲವಾ?... ನಿಜ ಹೇಳತೇನೆ. ನನಗೆ ಗೊತ್ತಿಲ್ಲ. ನನಗೆ ಒಂದು ಸಲ ಜ್ವರ ಬಂದು ವಾಸಿ ಆಗುವ ಹೊತ್ತಿಗೆ ಹೊತ್ತು ಗೊತ್ತು ಎಲ್ಲಾ ಅರಿವೂ ಹೊರಟು ಹೋಗಿತ್ತು. ಅನಂತ ಕಾಲವೇ ಆಯಿತೇನೋ. ಯಾಕೆಂದರೆ ಅಲ್ಲಿ ಕಾಲ ಬಲು ಉದ್ದ. ಅಲ್ಲಿ ಯಾರೂ ಗಂಟೆಗಳ ಲೆಕ್ಕ ಹಾಕುವುದಿಲ್ಲ. ವರ್ಷಗಳು ಉರುಳುವುದನ್ನೂ ಅವರು ಯಾರೂ ಗಮನಿಸಲ್ಲ. ದಿನ ಶುರುವಾಗಿ ದಿನ ಮುಗಿಯುತದೆ. ಆಮೇಲೆ ರಾತ್ರಿ. ಹಗಲು ದಿನ ರಾತ್ರಿ ದಿನ ರಾತ್ರಿ. ಸಾಯುವ ತನಕ ಇಷ್ಟೇ. ಅಲ್ಲಿನ ಜನಕ್ಕೆ ಯಾವ ಆಸೆಯೂ ಇಲ್ಲ, ಭರವಸೆಯೂ ಇಲ್ಲ.

'ಹೇಳಿದ್ದೇ ಹೇಳತೇನೆ ಅಂದುಕೊಳ್ಳುತ್ತೀಯೇನೋ. ಆದರೂ ಇದು ನಿಜ. ಹೊಸ್ತಿಲ ಮೇಲೆ ಕೂರುವುದು, ಸೂರ್ಯ ಹುಟ್ಟುವುದು, ನೆತ್ತಿಯ ಮೇಲೆ ಬರುವುದು, ಇಳಿದು ಮುಳುಗುವುದನ್ನ